



ಪಂಢರಿಬಾಯಿ



ಪಾರ್ವತಮ್ಮ ರಾಜಕುಮಾರ್

ಮೊದಲನೆಯದು ತೆರೆಯಮೇಲೆ ಕಾಣಿಸುವ ಕಲಾವಿದೆಯರ ಮೂಲಕ ಚರಿತ್ರೆಯನ್ನು ಕಟ್ಟುವ ಬಗೆಯಾದರೆ, ಎರಡನೆಯದು ಕಥನಗಳ ಮೂಲಕ. ಇನ್ನೊಂದು ಬಗೆ, ತೆರೆಯ ಹಿಂದೆ ನಿಂತು ಚಿತ್ರರಂಗವನ್ನು ಪೋಷಿಸುವ ಗಟ್ಟಿಗಿತ್ತಿಯರನ್ನು ಗುರ್ತಿಸುವುದು.

'ಸತಿ ಸುಲೋಚನಾ'ದ ಉದಾಹರಣೆಯನ್ನು ಮತ್ತೆ ನೆನಪಿಸಿಕೊಳ್ಳೋಣ. ನಾಯಕಿಯರ ದೃಷ್ಟಿಯಿಂದ ಮಾತ್ರವಲ್ಲ – ಕಥನದ ದೃಷ್ಟಿಯಿಂದಲೂ ಈ ಚಿತ್ರಕ್ಕೆ ಮಹತ್ವವಿದೆ. ಕಥನದ ಕೇಂದ್ರದಲ್ಲಿರುವುದು ನಾಯಕನಲ್ಲ – ನಾಯಕಿ. ಆ ನಾಯಕಿಯಾದರೂ ರಾಮಾಯಣದ ನಾಯಕಿಯಾದ ಸೀತೆಯಲ್ಲ; ಇಂದ್ರಜಿತುವಿನ ಪತ್ನಿ ಸುಲೋಚನಾ. ರಾಮಾಯಣದ ಕಥನಗಳಲ್ಲಿ ಮುಂಚೂಣಿಯಲ್ಲಿ ಕಾಣಿಸದ ಸುಲೋಚನಾಳ ಪಾತ್ರವನ್ನು ಕನ್ನಡ ಚಿತ್ರರಂಗ ಆರಂಭದಲ್ಲೇ ಚಿಂತಿಸಿರುವುದು ಸಾಮಾನ್ಯವಾದ ಸಂಗತಿಯಲ್ಲ. ಆದರೆ, ಅಷ್ಟೇನೂ ಮುಖ್ಯವಲ್ಲದ ಹೆಣ್ಣಿನ ಪಾತ್ರಗಳನ್ನು ಚಿತ್ರಿಸುವುದು ಪರಂಪರೆಯಾಗಿ ಕನ್ನಡ ಚಿತ್ರರಂಗದಲ್ಲಿ ಬೆಳೆಯಲಿಲ್ಲ ಎನ್ನುವುದನ್ನು ಗಮನಿಸಬೇಕು.

ಕನ್ನಡ ಸಿನಿಮಾದ ಬಹುತೇಕ ಸ್ತ್ರೀಪಾತ್ರಗಳಿಗೆ ಇರುವುದು ಎರಡೇ ಬಗೆಯ ಆಯಾಮಗಳು. ಮೊದಲನೆಯದು ಗೃಹಿಣಿ ಧರ್ಮ ಅಥವಾ ಮಾತೃತ್ವವನ್ನು ಪ್ರತಿಪಾದಿಸುವ ಪಾತ್ರಗಳು. ಮತ್ತೊಂದು ರತಿ ವರ್ಚಸ್ಸಿನ ಸೂತ್ರಗಳು.

## ಇಬ್ಬರು ಅಮ್ಮಂದಿರು!

ಮಾತೃಧರ್ಮದ ಪಾತ್ರಗಳು ಎಂದಕೂಡಲೇ ತಕ್ಷಣಕ್ಕೆ ನೆನಪಿಗೆ ಬರುವುದು ಇಬ್ಬರು ನಾಯಕಿಯರು – ಎಂ.ವಿ. ರಾಜಮ್ಮ ಹಾಗೂ ಪಂಢರಿಬಾಯಿ. ತ್ರಿಪುರಾಂಬ ಕನ್ನಡದ ಮೊದಲ ವಾಕ್ಚಿತ್ರದ ನಾಯಕಿಯಾದರೂ, ತನ್ನದೇ ಆದ ವರ್ಚಸ್ಸು ಪಡೆದುಕೊಂಡ ಮೊದಲ ನಾಯಕಿಯಾಗಿ ಗುರ್ತಿಸಿಕೊಂಡವರು ಎಂ.ವಿ. ರಾಜಮ್ಮ. 1943ರಲ್ಲಿ 'ರಾಧಾ ರಮಣ' ಸಿನಿಮಾ ನಿರ್ಮಿಸಿದ್ದ ಅವರು, ಕನ್ನಡದ ಮೊದಲ ಸಾಂಸಾರಿಕ ಚಿತ್ರಕಥನ 'ಸಂಸಾರ ನೌಕ'ದ ನಾಯಕಿಯೂ ಹೌದು.

ರಾಜಮ್ಮ 'ಪೀರ್ ಸಾಹೇಬರ ನಾಟಕ ಕಂಪನಿ'ಯ ಮೂಲಕ ಹೊರಬಂದ ಪ್ರತಿಭೆ. 'ಮೊದಲ ತೇದಿ', 'ಶಿವಶರಣೆ ನಂಬೆಯಕ್ಕ', 'ರಾಜಾ ವಿಕ್ರಮ', 'ಸತಿ ಶಕ್ತಿ', 'ಕಿತ್ತೂರು ಚೆನ್ನಮ್ಮ' ಅವರ ನಟನೆಯ ಕೆಲವು ಜನಪ್ರಿಯ ಚಿತ್ರಗಳು. 'ದಾರಿ ತಪ್ಪಿದ ಮಗ', 'ಬಂಗಾರದ ಪಂಜರ', 'ಸಂಪತ್ತಿಗೆ ಸವಾಲ್' ಚಿತ್ರಗಳಲ್ಲಿನ ಅವರ ಅಮ್ಮನ ಪಾತ್ರಗಳು ಜನಮನದಲ್ಲಿ ಅಚ್ಚಳಿಯದುಳಿದಿವೆ.

ಎಂ. ಪಂಢರಿಬಾಯಿ ಮಾತೃ ಪರಂಪರೆಯ ಮತ್ತೊಬ್ಬ ಪ್ರಮುಖ ಅಭಿನೇತ್ರಿ. 'ವಾಣಿ'(1943) ಚಿತ್ರದ ಮೂಲಕ ಚಿತ್ರರಂಗ ಪ್ರವೇಶಿಸಿ ತನ್ನ ಕಾಲದ ಬಹುತೇಕ ಜನಪ್ರಿಯ ನಾಯಕರಿಗೆ ಜೋಡಿಯಾಗಿದ್ದರು. 'ಸೋದರಿ', 'ರಾಯರ ಸೊಸೆ', 'ಬಂಗಾರದ ಹೂವು', 'ಅಮ್ಮ', 'ಗೆಜ್ಜೆಪೂಜೆ', 'ಸಂಧ್ಯಾರಾಗ', 'ನಮ್ಮ ಮಕ್ಕಳು', 'ಸತ್ಯ ಹರಿಶ್ಚಂದ್ರ', 'ಜೇನುಗೂಡು', 'ಕೆರಳಿದ ಸಿಂಹ', 'ಅನುರಾಗ ಅರಳಿತು' ಹಾಗೂ 'ಜೀವನಚೈತ್ರ' ಅವರ ಅಭಿನಯದ ಕೆಲವು ಚಿತ್ರಗಳು. ರಾಜ್‌ಕುಮಾರ್, ಎಂಜಿಆರ್, ಶಿವಾಜಿಗಣೇಶನ್, ರಜನಿಕಾಂತ್ ಸೇರಿದಂತೆ ದಕ್ಷಿಣ ಭಾಷೆಗಳ ಬಹುತೇಕ ಸೂಪರ್ ಸ್ಟಾರ್‌ಗಳಿಗೆ ತಾಯಿಯಾಗಿ ನಟಿಸಿದ ಅಗ್ಗಳಿಕೆ ಅವರದು.

'ಶ್ರೀಕೃಷ್ಣ ಚೈತನ್ಯ ನಾಟಕ ಸಭಾ' ಎನ್ನುವ ರಂಗಭೂಮಿ ಬಳಗವನ್ನು ಕಟ್ಟಿದ ಪಂಢರಿಬಾಯಿ ಊರೂರು ಅಲೆದು ನಾಟಕ ಮಾಡಿದರು. ಸಿನಿಮಾ–ನಾಟಕ ಎಂದು ಕಾಲ ಕಳೆದ ಪಂಢರಿಬಾಯಿ ಮದುವೆಯಾದಾಗ ಅವರಿಗೆ ಐವತ್ತು ವರ್ಷ ವಯಸ್ಸಾಗಿತ್ತು!

## ಪಾರ್ವತಮ್ಮ: ಮೂರನೇ ಶಕ್ತಿ

ರಾಜಮ್ಮ, ಪಂಢರಿಬಾಯಿ ಅವರ ನಂತರ 'ಮಾತೃಪರಂಪರೆ'ಯ ಮುಂದುವರಿದ ಭಾಗವಾಗಿ ಪಾರ್ವತಮ್ಮ ರಾಜಕುಮಾರ್ ಕಾಣಿಸುತ್ತಾರೆ. ಮುತ್ತುರಾಜ್ ಎನ್ನುವ ಹುಡುಗನೊಬ್ಬ ರಾಜಕುಮಾರ್ ಆಗಿ ಬದಲಾದಷ್ಟೇ ದೊಡ್ಡ ಬೆರಗು, ಪಾರ್ವತಿ ಎನ್ನುವ ತರುಣಿಯೊಬ್ಬಳು 'ಅಕ್ಕಾವ್ರು' ಆಗಿ ರೂಪುಗೊಂಡದ್ದು. ತನ್ನ ಕುಟುಂಬದ ಜೊತೆಗೆ ಚಿತ್ರರಂಗಕ್ಕೊಂದು ಸಾಂಸ್ಥಿಕ ರೂಪು ನೀಡಲು ಪ್ರಯತ್ನಿಸಿದ್ದು ಪಾರ್ವತಮ್ಮನವರ ಮುಖ್ಯ ಸಾಧನೆ. ನಟಿಸದೆಯೂ ಕನ್ನಡ ಚಿತ್ರರಂಗದ ನಂ.1 ನಾಯಕಿ ಅವರು. ಮಂಜುಳಾ, ಜಯಮಾಲಾ, ಸುಧಾರಾಣಿ, ರಕ್ಷಿತಾ, ರಮ್ಯಾ, ಮಾಲಾಶ್ರೀ, ಪ್ರೇಮಾ ಮುಂತಾದ ಹಲವು ನಟಿಯರನ್ನು ಕನ್ನಡ ಚಿತ್ರರಂಗಕ್ಕೆ ಪರಿಚಯಿಸಿದ ಕೀರ್ತಿ ಅವರದು. ದೊಡ್ಡ ಕುಟುಂಬವನ್ನು ಸಂಭಾಳಿಸಿದ ಗಟ್ಟಿಗಿತ್ತಿ ಅವರು. ಕುಟುಂಬ ಎನ್ನುವುದು ಅವರ ಪಾಲಿಗೆ ವೈಯಕ್ತಿಕವೂ ಆಗಿತ್ತು, ಚಿತ್ರರಂಗವೂ ಆಗಿತ್ತು.